ಒಂದಾನೊಂದು ಕಾಲದಲ್ಲಿ ಒಬ್ಬ ರಾಜನಿದ್ದ. ಅವನಿಗೊಬ್ಬಳು ಮಗಳು. ರಾಜ ರಾಣಿ ಇಬ್ಬರೂ ತಮ್ಮ ಮಗಳನ್ನು ತುಂಬಾ ಪ್ರೀತಿಸುತ್ತಿದ್ದರು. ರಾಜಕುಮಾರಿಯ ಹುಟ್ಟಿದ ಹಬ್ಬವನ್ನು ಪ್ರತಿವರ್ಷವೂ ಅರಮನೆಯಲ್ಲಿ ವಿಜೃಂಭಣೆಯಿಂದ ಆಚರಿಸುತ್ತಿದ್ದರು. ಹೀಗಿರಲು ರಾಜಕುಮಾರಿಗೆ 16 ವರ್ಷಗಳು ತುಂಬಿದವು. ಆ ವರ್ಷ ಅವಳ ಹುಟ್ಟುಹಬ್ಬವನ್ನು ಅದ್ದೂರಿಯಿಂದ ಆಚರಿಸಿ ಅನಂತರ ಅವಳ ಸ್ವಯಂವರವನ್ನು ಏರ್ಪಡಿಸಬೇಕೆಂದು ಆಲೋಚಿಸಿದರು. ರಾಜಕುಮಾರಿ ತಂದೆಯ ಬಳಿಗೆ ಬಂದು 'ಅಪ್ಪ ಈ ಸಲ ನನ್ನ ಹುಟ್ಟಿದ ಹಬ್ಬವನ್ನು ಅರಮನೆಯ ತೋಟದಲ್ಲಿ ನನ್ನ ಗೆಳತಿಯರೊಡನೆ ಹುಣ್ಣಿಮೆಯ ರಾತ್ರಿ ವನಭೋಜನವನ್ನೇರ್ಪಡಿಸಿ ಸರಳವಾಗಿ ಆಚರಿಸಿಕೊಳ್ಳಬೇಕೆಂದು ಆಸೆಯಾಗಿದೆ' ಎಂದು ನಾಚುತ್ತ ಹೇಳಿದಳು. ಮಹಾರಾಜ ಅದಕ್ಕೆ ನಗುತ್ತ 'ಅದಕ್ಕೆ ಸಂಕೋಚವೇಕಮ್ಮ ನಿನ್ನ ಇಷ್ಟದಂತೆಯೇ ಆಗಲಿ. ನಿನ್ನ ಸಂತೋಷವೇ ನಮ್ಮ ಸಂತೋಷ. ಹಾಗೇ ಮಾಡೋಣ' ಎಂದ.

ರಾಜಕುಮಾರಿ ಗೆಳತಿಯರಿಗೆಲ್ಲ ಕರೆಯೋಲೆ ಕಳಿಸಿದಳು. ಅವರೆಲ್ಲರೂ ಸಂತೋಷ ಸಂಭ್ರಮದಿಂದ ಬಂದು ಸೇರಿದರು. ಅಡಿಗೆಯವರು ಬೇಕಾದ ರಸಗವಳ ತಯಾರಿಸಿದರು. ಎಲ್ಲರೂ ಬಣ್ಣದ ಚಿಟ್ಟೆಗಳಂತೆ ಆ ಹೂ ತೋಟದಲ್ಲಿ ಬೆಳದಿಂಗಳ ರಾತ್ರಿಯಲ್ಲಿ ನಕ್ಕು ನಲಿದು ಆಟವಾಡಿ ಸ್ವಲ್ಪ ಹೊತ್ತು ಸಂತೋಷವಾಗಿ ಕಾಲ ಕಳೆದು, ಊಟಕ್ಕೆ ಸಿದ್ಧರಾಗಿ ಗುಂಪಾಗಿ ಕುಳಿತರು. ಅಡಿಗೆಯವರು ಬಗೆಬಗೆಯ ರಸಪಾಕಗಳನ್ನು ಬಡಿಸಲಾರಂಭಿಸಿದರು. ರಾಜಕುಮಾರಿ ಗುಂಪಿನಿಂದ ಎದ್ದು ಬಂದು 'ಇವರಿಗೆಲ್ಲ ಈವತ್ತು ನಾನೇ ಬಡಿಸುತ್ತೇನೆ' ಎಂದು ಅವರ ಕೈಯಿಂದ ಪಾತ್ರೆಯನ್ನು ತೆಗೆದುಕೊಂಡು ಪೀತಾಂಬರದ ಸೆರಗನ್ನು ಅಡ್ಡಕಟ್ಟಿ ನಿಂತಳು. ಎಲ್ಲರೂ ಅವಳನ್ನು ಕೌತುಕದಿಂದ ನೋಡುತ್ತಿದ್ದಂತೆಯೇ ಜೋರಾಗಿ ಬಿರುಗಾಳಿ ಬೀಸಿ ಬಂದಿತು. ಬಡಿಸಿಟ್ಟ ತಟ್ಟೆ, ಅಡಿಗೆ ಪಾತ್ರೆಗಳನ್ನು ರಾಶಿ ರಾಶಿ ದೂಳು, ಕಸ ಕಡ್ಡಿ ತರಗೆಲೆಗಳು ತುಂಬಿ ಹೋದವು. ಕಣ್ಣು ಬಿಡಲಾರದೆ ಎಲ್ಲರೂ ಕುಳಿತಲ್ಲೇ ಕಣ್ಣು ಮುಚ್ಚಿ ತಲೆ ತಗ್ಗಿಸಿಬಿಟ್ಟರು. ಬಿರುಗಾಳಿ ಭೋರ್ಗರೆಯುತ್ತ ಸುಂಟರಗಾಳಿಯಾಗಿ, ನಿಂತಿದ್ದ ರಾಜಕುಮಾರಿಯನ್ನು ಮೇಲಕ್ಕೆ ಹಾರಿಸಿಕೊಂಡು ಹೋಗಿ ಬೇರೆ ಯಾವುದೋ ಒಂದು ತೋಟದಲ್ಲಿ ಕೆಡವಿಬಿಟ್ಟಿತು. ರಾಜಕುಮಾರಿ ಮೂರ್ಛೆ ಹೋದಳು. ಎಷ್ಟೋ ಹೊತ್ತಿನ ಮೇಲೆ ಎಚ್ಚೆತ್ತು ಸುತ್ತಲೂ ನೋಡಿದಾಗ ತನ್ನ ತಂದೆ ತಾಯಿ ಗೆಳತಿ ಯಾರೂ ಕಾಣಲಿಲ್ಲ. ಗಾಳಿ ತನ್ನನ್ನು ಎತ್ತಿ ಮೇಲೆ ಒಯ್ದಿದ್ದು ನೆನಪಾಯಿತು. ಅಯ್ಯೋ ಇದು ನಮ್ಮ ತೋಟವಲ್ಲ ಯಾರದೋ ತೋಟದಲ್ಲಿ ನನ್ನನ್ನು ಕೆಡವಿದೆ. ರಾಜ ರಾಣಿ ಎಷ್ಟು ದುಃಖ ಪಡುತ್ತಿದ್ದಾರೋ ಮಿಕ್ಕವರ ಪಾಡು ಏನಾಯಿತೋ ಎಂದೆಲ್ಲ ಆಲೋಚನೆಗಳು ಬಂದವು.